ಚಿಕ್ಕಮಗಳೂರು ನಗರ ನೀರು ಸರಬರಾಜು ಯುಗಚಿ ಕಾಮಗಾರಿ ಯೋಜನೆಯಲ್ಲಿ ಅವ್ಯವಹಾರ

2791 (3141) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರ ನೀರು ಸರಬರಾಜುಯೋಜನೆ ಯುಗಚಿ 3ನೇ ಹಂತದ ಕಾಮಗಾರಿ ಕೆಲಸಕ್ಕೆ ಸಂಬಂಧಿಸಿದ 1.30 ಕೋಟಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವ್ಯವಸ್ಥಾಪಕ ನಿರ್ದೇಶಕರೇ ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದು ಮದ್ರಾಸಿನ ಸುಪ್ರೀಂ ಪೈಪ್ ಕಂಪನಿ ನಕಲಿ ಬ್ಯಾಂಕ್‌ನ ಚೆಕ್‌ನ್ನು ಭದ್ರತಾ ಠೇವಣಿಯಾಗಿ ಪಡೆದಿದ್ದು ಪೇ ಆರ್ಡರ್ ಅಥವಾ ಡಿ.ಡಿ. ಮೂಲಕ ಭದ್ರತಾ ಠೇವಣಿ ಪಡೆಯಬೇಕೆಂಬ ನಿಯಮ ವನ್ನೇ ಉಲ್ಲಂಘಿಸಿ ಗುತ್ತಿಗೆ ಪಡೆದಿದ್ದ ಸುಪ್ರೀಂ ಪೈಪ್ ಕಂಪನಿ ತಲೆಮರೆಸಿಕೊಂಡು ಹೋಗಿರುವುದು ನಿಜವೇ?

ಇ) ಈ ಕಂಪನಿ ಎಷ್ಟು ಮಾತ್ರದ ಕೆಲಸ ಮಾಡಿದೆ? ಈ ಕಂಪನಿಗೆಷ್ಟು ಹಣ ಪಾವತಿಸಲಾಗಿದೆ? ಈಗ ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿದೆ? ಈ ಅವ್ಯವಹಾರಕ್ಕೆ ಕಾರಣರಾದ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ನಿಜವಲ್ಲ. ಭದ್ರತಾ ಠೇವಣಿಯಾದ 16.10 ಲಕ್ಷಗಳಿಗೆ ಕಂಪನಿಯವರು ಟೈಮ್ಸ್ ಬ್ಯಾಂಕ್ ಚೆನ್ನೈ ಹೆಸರಿನ ಚೆಕ್ ಕೊಟ್ಟಿದ್ದು, ಈ ಹಣವು ಮಂಡಲಿಗೆ ಜಮಾ ಆಗಿರುರುತ್ತದೆ. ಮೆ: ಸುಪ್ರೀಂ ಪೈಪ್ ಕಂಪನಿ ಮದ್ರಾಸ್, ತಲೆ ಮರೆಸಿಕೊಂಡಿರುವುದು ನಿಜವಲ್ಲ.

ಇ) ಕಂಪನಿಯವರು ಈಗಾಗಲೇ ಸುಮಾರು ರೂ. 40.00 ಲಕ್ಷಗಳಷ್ಟು ಕೆಲಸ ಮಾಡಿದ್ದಾರೆ. ಮಂಡಲಿಯಿಂದ ಈವರೆವಿಗೂ ಯಾವುದೇಬಿಲ್ಲುಗಳನ್ನು ಪಾವತಿಸಲಾಗಿರುವುದಿಲ್ಲ. ಈ ಕಾಮಗಾರಿಯನ್ನು ಮೆ: ಸುಪ್ರೀಂ ಪೈಪ್ ಕಂಪನಿ ಪೈವೇಟ್ ಲಿಮಿಟೆಡ್ ಹಾಗೂ ಅವರ ಜೊತೆಯಲ್ಲಿ ಪಾಲುದಾರ ಕಂಪನಿಯವರಾದ ಮೆ: ಪ್ರಾಂಜಲಿ ಎನ್ ವೈರ್‌ನ ಮೆಂಟ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರು ಸೇರಿ ಯೋಜನೆಯ ಕಾಮಗಾರಿಗಳನ್ನು ಅನುಮೋದಿತ ಹಳೇಟೆಂಡರ್ ದರಗಳಲ್ಲಿಯೇ ಮಾಡುತ್ತಿರುತ್ತಾರೆ. ಆದ್ದರಿಂದವ್ಯವಸ್ಥಾಪಕ ನಿರ್ದೇಶಕರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪುರಸಭೆ, ನಗರಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಬೇರೆ ಇಲಾಖೆಯಿಂದ ನಿಯೋಜನೆ ಮಾಡಿರುವುದನ್ನು ತಡೆಹಿಡಿಯುವುದು

2792 (3361) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?